**<u>ಸಾಕ್ಷಿಯನ್ನು ಇಂದು ದಿ.28.02.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ಶ್ರೀ.SSS., ವಕೀಲರಿಂದ 5 ಮತ್ತು 6 ನೇ ಎದುರುದಾರ ಪರವಾಗಿಃ</u>**

8) ನನ್ನ ಜಮೀನು ಸ್ವಾಧೀನ ಪಡಿಸಿಕೊಳ್ಳುವ ಮೊದಲು 1 ನೇ ಎದುರುದಾರರು ನನಗೆ ನೊಟೀಸನ್ನು ನೀಡಿರುತ್ತಾರೆ ಎಂದರೆ ಸರಿ. ಆ ನೊಟೀಸ ಮೇರೆಗೆ ನಾನು 1 ನೇ ಎದುರುದಾರರಲ್ಲಿಗೆ ಹೋಗಿ ಹಾಜರಾಗಿರುತ್ತೇನೆ ಎಂದರೆ ಸರಿ. ಆ ಸಮಯದಲ್ಲಿ ನಾನು 1 ನೇ ಎದುರುದಾರರಲ್ಲಿ ನನ್ನ ಸ್ವಾಧೀನಗೊಳ್ಳುವ ಜಮೀನಿಗೆ ಇಂತಿಷ್ಟೇ ಮಾರುಕಟ್ಟೆ ಬೆಲೆ ಇರುತ್ತದೆ ಎಂದು ತೋರಿಸಲು ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. 1 ನೇ ಎದುರುದಾರರು ನೊಟೀಸನ್ನು ನೀಡಿದ ನಂತರ ವಿಚಾರಣೆಗಾಗಿ ನಾನು ಅವರ ಕಛೇರಿಗೆ ಹೋಗಿರುವುದಿಲ್ಲ. 1 ನೇ ಎದುರುದಾರರು ನನ್ನ ಜಮೀನಿಗೆ ಸಂಬಂಧಿಸಿದಂತೆ ಮಾರುಕಟ್ಟೆ ಬೆಲೆಗೆ ಸರಿಯಾದ ದಾಖಲೆಗಳನ್ನು ಕಲೆಹಾಕಿ ಅವುಗಳ ಆಧಾರದ ಮೇಲೆ ಪರಿಹಾರ ನೀಡಿರುತ್ತಾರೆ ಎಂದರೆ ಸರಿಯಲ್ಲ.

9) ನನ್ನ ಜಮೀನು ಒಣಬೇಸಾಯದ ಜಮೀನು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನೀರಾವರಿ ಜಮೀನು ಇರುತ್ತದೆ ಎಂದು ನುಡಿದಿರುತ್ತಾರೆ. ನಮಗೆ ಸೇರಿದ 21 ಗುಂಟೆ ಜಮೀನನ್ನು ಭೂಸ್ವಾಧೀನಪಡಿಸಿಕೊಂಡಿರುತ್ತಾರೆ. ನಮ್ಮ ಊರು ಹಳ್ಳೂರ ಗ್ರಾಮದಲ್ಲಿ ಒಣಬೇಸಾಯದ ಜಮೀನುಗಳು ಸಾಕಷ್ಟು ಖರೀದಿಯಾಗಿರುತ್ತವೆ ಎಂದರೆ ಸರಿ. ನನ್ನ ಜಮೀನಿಗೆ ಇಂತಿಷ್ಟೇ ಮಾರುಕಟ್ಟೆ ಬೆಲೆ ಇರುತ್ತದೆ ಎಂದು ತೋರಿಸಲು ನನ್ನ ಜಮೀನು ಸ್ವಾಧೀನಪಡಿಸಿಕೊಳ್ಳುವ ಹಿಂದಿನ 3 ವರ್ಷಗಳ ಅವಧಿಯಲ್ಲಿ ಖರೀದಿಯಾದ ನಮ್ಮೂರಿನ ಜಮೀನುಗಳ ಖರೀದಿ ಪತ್ರಗಳನ್ನು ಅಥವಾ ಖರೀದಿ ಒಪ್ಪಂದ ಪತ್ರಗಳನ್ನು ನಾನು ಹಾಜರುಪಡಿಸಿಲ್ಲ ಎಂದರೆ ಸರಿ. ನಾನು ಹಾಜರುಪಡಿಸಿದ ನಿ.ಪಿ.2 ರಿಂದ 6 ಖರೀದಿ ಪತ್ರದ ಜಮೀನುಗಳು ಎಷ್ಟು ಬೆಲೆಗೆ ಮತ್ತು ಯಾರು ಖರೀದಿಸಿರುತ್ತಾರೆ ಎನ್ನುವ ಕುರಿತು ನನಗೆ ಮಾಹಿತಿ ಇರುವುದಿಲ್ಲ.

10) ನಾನು ಹಾಜರುಪಡಿಸಿದ ನಿ.ಪಿ.2 ರಿಂದ 6 ಪತ್ರಗಳ ಜಮೀನುಗಳು ನನ್ನ ಜಮೀನಿನ ಸ್ವರೂಪದ ಜಮೀನುಗಳು ಎಂದು ತೋರಿಸಲು ನಾನು ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ. ಸದರಿ ಖರೀದಿ ಪತ್ರಗಳು ಈ ಪ್ರಕರಣಕ್ಕೆ ಅನ್ವಯವಾಗುವುದಿಲ್ಲ ಎಂದು ಸೂಚಿಸುವುದು ಸುಳ್ಳು. ನಿ.ಪಿ.2 ರಿಂದ 6 ರಲ್ಲಿ ನಮೂದಿಸಲಾದ ಜಮೀನುಗಳು ನಮ್ಮ ಜಮೀನಿಗೆ ಹೊಂದಿಕೊಂಡು ಇರುವುದಿಲ್ಲ ಎನ್ನುವುದು ನಿಜ.

11) ದಿನಾಂಕಃ 04.02.2010 ರಿಂದ 04.02.2013 ರ ವರೆಗಿನ ಹಳ್ಳೂರ ಗ್ರಾಮದ 16

ಒಣಬೇಸಾಯದ ಹಾಗೂ ನೀರಾವರಿಗೆ ಸಂಬಂಧಿಸಿದ ಖರೀದಿ ಪತ್ರಗಳನ್ನು ಪರಿಶೀಲಿಸಿ ನಮಗೆ ಭೂ-ಪರಿಹಾರ ಮಂಜೂರು ಮಾಡಿರುತ್ತಾರೆ ಎನ್ನುವುದು ನಿಜ. ಪರಿಹಾರ ಧನ ನಿಗದಿಪಡಿಸಿದ್ದರ ಕುರಿತು 1 ನೇ ಎದುರುದಾರರು ನನಗೆ ನೊಟೀಸನ್ನು ನೀಡಿರುವುದಿಲ್ಲ. ನಮ್ಮ ಜಮೀನನ್ನು ಭೂಸ್ವಾಧೀನಪಡಿಸಿಕೊಂಡ ವಿಷಯ ಗೊತ್ತಾದ 41 ದಿನಗಳ ಒಳಗಾಗಿ ರೆಫರೆನ್ಸ ಅರ್ಜಿಯನ್ನು ಸಲ್ಲಿಸಿರುತ್ತೇನೆ. ಸದರಿ ರೆಫರೆನ್ಸ ಅರ್ಜಿ ಸಲ್ಲಿಸಿದಂತಹ ದಿನಾಂಕವನ್ನು ನಿರ್ಧಿಷ್ಟವಾಗಿ ಹೇಳಲು ಆಗುವುದಿಲ್ಲ.

12) ಐತೀರ್ಪು ಘೋಷಿಸಿದ್ದರ ಕುರಿತು 1 ನೇ ಎದುರುದಾರರು ದಿನಾಂಕಃ 24.11.2015 ರಂದು ನನಗೆ ನೊಟೀಸನ್ನು ನೀಡಿರುತ್ತಾರೆ ಎನ್ನುವುದು ನಿಜ. ನಾನು ನಿ.ಪಿ.1 ರಂತೆ ರೆಫರೆನ್ಸ ಅರ್ಜಿಯನ್ನು ದಿನಾಂಕಃ 08.01.2016 ರಂದು ಸಲ್ಲಿಸಿರುತ್ತೇನೆ ಎನ್ನುವುದು ನಿಜ. ರೆಫರೆನ್ಸ ಅರ್ಜಿಯನ್ನು ಸಲ್ಲಿಸಿದ ಒಂದು ತಿಂಗಳ ನಂತರ ನಾವು ಸಲ್ಲಿಸಿದಂತಹ ಅರ್ಜಿಯನ್ನು ನ್ಯಾಯಾಲಯಕ್ಕೆ ಕಳುಹಿಸಿರುತ್ತಾರೋ ಅಥವಾ ಇಲ್ಲವೋ ಎನ್ನುವ ಕುರಿತು ವಿಚಾರಣೆ ಮಾಡಿರುವುದಿಲ್ಲ. ನಮ್ಮ ರೆಫರೆನ್ಸ ಅರ್ಜಿಯನ್ನು ನ್ಯಾಯಾಲಯಕ್ಕೆ ಕಳುಹಿಸಿಕೊಡುವಂತೆ ಕೋರಿ ಮಿಸಲೇನಿಯಸ ದಾಖಲು ಮಾಡಿರುವುದಿಲ್ಲ. ನಮ್ಮ ರೆಫರೆನ್ಸ ಅರ್ಜಿ ಕಾಲಮಿತಿಯಲ್ಲಿ ಇರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ. ನಮ್ಮ ಜಮೀನಿಗೆ ಎಷ್ಟು ಪರಿಹಾರ ಧನ ನಿಗದಿಪಡಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

13) ಹಳ್ಳೂರದಿಂದ ಮುದ್ದೇಬಿಹಾಳಕ್ಕೆ ಹೋಗಬೇಕಾದರೆ ಢವಳಗಿ ಹಾಗೂ ಬಿದರಕುಂದಿ ಮಾರ್ಗವಾಗಿ ಹೋಗಬೇಕಾಗುತ್ತದೆ ಎನ್ನುವುದು ನಿಜ. ಹಳ್ಳೂರದಿಂದ ತಾಳಿಕೋಟಿಗೆ ಹೋಗಬೇಕಾದರೆ ಚೊಂಡಿ, ಮಡಿಕೇಶ್ವರ, ವನಹಳ್ಳಿ, ಲಿಂಗದಳ್ಳಿ ಹಾಗೂ ಮಿಣಜಗಿ ಮಾರ್ಗವಾಗಿ ಹೋಗಬೇಕಾಗುತ್ತದೆ ಎನ್ನುವುದು ನಿಜ. ಮುದ್ದೇಬಿಹಾಳದಿಂದ 4 ಕಿಮೀ ಅಂತರದಲ್ಲಿ ಹಡಲಗೇರಿ ಗ್ರಾಮ ಇರುತ್ತದೆ ಎನ್ನುವುದು ನಿಜ. ಮುದ್ದೇಬಿಹಾಳದಿಂದ ಕವಡಿಮಟ್ಟಿ, ಹಿರೇ ಮುರಾಳ, ನಾಗರಬೆಟ್ಟ ಮಾರ್ಗವಾಗಿ ನಾಲತವಾಡಕ್ಕೆ ಹೋಗಬೇಕಾಗುತ್ತದೆ ಎನ್ನುವುದು ನಿಜ. ಹಳ್ಳೂರದಿಂದ ಮುದ್ದೇಬಿಹಾಳ ಶಹರ 30 ಕಿ.ಮೀ ಅಂತರದಲ್ಲಿ ಇರುತ್ತದೆ ಎಂದು ಸೂಚಿಸುದು ಸರಿಯಲ್ಲ ಸಾಕ್ಷಿ ಮುಂದುವರೆದು 8 ಕಿ.ಮೀ ಅಂತರದಲ್ಲಿರುತ್ತದೆ. ಮುದ್ದೇಬಿಹಾಳ, ಬಿದರಕುಂದಿ, ತಾಳಿಕೋಟಿ ಮತ್ತು ಹಡಲಗೇರಿ ಗ್ರಾಮಗಳು ಹಳ್ಳೂರ ಗ್ರಾಮಕ್ಕೆ ಹೊಂದಿಕೊಂಡು ಇರುವುದಿಲ್ಲ ಎನ್ನುವುದು ನಿಜ. ನಿ.ಪಿ.2 ರಿಂದ 6 ದಾಖಲೆಗಳು ಈ ಪ್ರಕರಣಕ್ಕೆ ಅನ್ವಯವಾಗುವುದಿಲ್ಲ ಎನ್ನುವುದು ಸರಿಯಲ್ಲ. ಸ.ನಂ.46/3 ಮತ್ತು 53/2 ನಮ್ಮ ಜಮೀನದ ಪಕ್ಕದಲ್ಲಿಯೇ ಇರುತ್ತವೆ ಎನ್ನುವುದು ನಿಜ. ಸದರಿ

ಜಮೀನುಗಳು ಖರೀದಿ ಪತ್ರಗಳನ್ನು ಪರಿಗಣಿಸಿ ನಮ್ಮ ಜಮೀನಿಗೆ ಸೂಕ್ತ ಮಾರುಕಟ್ಟೆ ಬೆಲೆ ನಿರ್ಧರಿಸಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ.

14) ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆದಿರುವ ಎಲ್ಲ ವಿಷಯಗಳು ಸುಳ್ಳು ಇರುತ್ತವೆ ಎಂದರೆ ಸರಿಯಲ್ಲ. ನನ್ನ ಜಮೀನಿಗೆ ಸಂಬಂಧಿಸಿದಂತೆ 1 ನೇ ಎದುರುದಾರರು ನಿಗದಿ ಮಾಡಿದ ಪರಿಹಾರ ಕಾನೂನು ಪ್ರಕಾರವಾಗಿ ಸರಿಯಾಗಿದೆ ಎಂದರೆ ಸರಿಯಲ್ಲ. ನಾನು ಉದ್ದೇಶಪೂರ್ವಕವಾಗಿ ಹೆಚ್ಚಿನ ಪರಿಹಾರ ಪಡೆಯುವ ಸಲುವಾಗಿ ಸುಳ್ಳು ದಾಖಲೆಗಳನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮುಂದುವರೆದು 5 ಮತ್ತು 6 ನೇ ಎದುರುದಾರರ ಪರ ವಕೀಲರು 1 ರಿಂದ 4 ನೇ ಎದುರುದಾರರ ಪರವಾಗಿ ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಳ್ಳುವುದಾಗಿ ಹೇಳುತ್ತಾರೆ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ. ಸರಿ ಅದೆ.

3 ನೇ ಹೆಚ್ಚುವರಿ ಜಿಲ್ಲಾ ನ್ಯಾಯಾಧೀಶರು,
ವಿಜಯಪುರ.